**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 15-09-1969.**

**(ओम शान्ति, बापदादा. अव्यक्त मुरली 15-09-1969)**

***ಸ್ಮೃತಿಯ ಆಧಾರದ ಮೇಲೆ ಸ್ಮೃತಿಚಿಹ್ನೆ(ಯಾದಗಾರ್)*(याद के आधार पर यादगार)**

ಶಬ್ದಕ್ಕೆ ಅತಿತವಾಗಿ ಹೋಗಬೇಕೋ ಅಥವಾ ಬಾಪ್ ದಾದಾ ಅವರನ್ನು ಪುನಃ ಶಬ್ದದಲ್ಲಿ ತರಬೇಕಾಗಿದೆಯೇ, ಶಬ್ದದಿಂದ ಅತಿತವಾಗಿ ಇರುತ್ತಿದ್ದೀರಿ ಮತ್ತೆ ತಂದೆಯನ್ನೇಕೆ ಶಬ್ದದಲ್ಲಿ ತರುತ್ತಿದ್ದೀರಿ! ಶಬ್ದದಲ್ಲಿ ಬಂದರೂ ಅತೀಂದ್ರಿಯ ಸುಖದಲ್ಲಿ ಇರಬಲ್ಲಿರಾದರೆ ಶಬ್ದದಿಂದ ಅಲಿಪ್ತ(ಅತೀತ)ರಾಗುವ ಪ್ರಯತ್ನವೇಕೆ? ಶಬ್ದದಿಂದ ದೂರ ನಿರಾಕಾರ ರೂಪದಲ್ಲಿ ಸ್ಥಿತರಾಗಿ ಪುನಃ ಸಾಕಾರದಲ್ಲಿ ಬಂದರೆ ಬೇರೆಯವರನ್ನೂ ಆ ಅವಸ್ಥೆಯಲ್ಲಿ ತರಬಲ್ಲಿರಿ. ಒಂದು ಕ್ಷಣದಲ್ಲಿ ನಿರಾಕಾರ-ಒಂದು ಕ್ಷಣದಲ್ಲಿ ಸಾಕಾರ ಈ ರೀತಿಯ ವ್ಯಾಯಾಮ ಕಲಿಯಬೇಕು. ಈಗೀಗಲೇ ನಿರಾಕಾರಿ, ಈಗೀಗಲೇ ಸಾಕಾರಿಯಾಗುವ ಸ್ಥಿತಿಯಾದಾಗ ಸಾಕಾರ ರೂಪದಲ್ಲಿ ಪ್ರತಿಯೊಬ್ಬರಿಗೂ ನಿರಾಕಾರ ರೂಪದ ಸಾಕ್ಷಾತ್ಕಾರ ತಮ್ಮಿಂದ ಆಗುವುದು. ತಮ್ಮ ಸಾಕ್ಷಾತ್ಕಾರ ಮಾಡಿಕೊಂಡಿರುವಿರಾ? ಬ್ರಾಹ್ಮಣ ರೂಪದಲ್ಲಿಯಂತೂ ಇರುವಿರಿ. ಒಂದು ವೇಳೆ ತಮ್ಮ ಸಾಕ್ಷಾತ್ಕಾರ ಮಾಡಿದ್ದರೆ ತಮ್ಮ ನಂಬರಿನ ಸಾಕ್ಷಾತ್ಕಾರ ಮಾಡಿದ್ದೀರಾ? ಮತ್ತೆ ಬೇರೆ ಯಾವುದಾದರೂ ರೂಪದಲ್ಲಿ ತಮ್ಮ ಸಾಕ್ಷಾತ್ಕಾರ ಮಾಡಿದ್ದೀರಾ? ತಮ್ಮ ಮೂಲ ರೂಪವನ್ನು ಮರೆತಿರುವಿರಾ? ವರ್ತಮಾನ ಸಮಯ ತಾವು ಯಾವ ರೂಪದಿಂದ ಸೇವೆ ಮಾಡಬಲ್ಲಿರಿ? ಜಗನ್ಮಾತೆ.

ಇಂದು ವಿಶೇಷ ಮಾತೆಯರ ಕಾರ್ಯಕ್ರಮವಾಗಿದೆ. ಮಾತೆಯ ರೂಪದಲ್ಲಿಯೇ ಇದ್ದು ಜಗತ್ಮಾತೆ ಆಗಬೇಕು. ಮಾತೆಯಾಗದೆ ಪಾಲನೆ ಮಾಡಲಾರಿರಿ. ಇಂದು ಮಾತೆಯರನ್ನು ಏಕೆ ಕರೆಯಲಾಗಿದೆ? ಆಸ್ತಿಗೆ ಅಧಿಕಾರಿಗಳು ಆಗಿರುವಿರೋ ಅಥವಾ ಆಗಬೇಕೋ? ವಾರಸುದಾರರು ಆಗಿದ್ದೀರೋ ಅಥವಾ ಆಗಲು ಬಂದಿರುವಿರೋ? ವಾರಸುದಾರರಾದಾಗ ಆಸ್ತಿಯಂತೂ ಇದ್ದೇ ಇರುತ್ತದೆ, ವಾರಸುದಾರರು ಆಗಿರುವಿರಿ ಆದರೆ ಆಸ್ತಿ ಸಿಕ್ಕಿಲ್ಲವೇ? ಆಸ್ತಿಗೆ ಅಧಿಕಾರಿಗಳಂತೂ ಆಗಿದ್ದೀರಿ. ಈಗ ಯಾವ ಕಾರ್ಯಕ್ಕಾಗಿ ಬಂದಿರುವಿರಿ? ಬಾಪ್ ದಾದಾ ಅವರು ಅವಶ್ಯವಾಗಿ ಯಾವುದಾದರೂ ವಿಶೇಷ ಕಾರ್ಯಕ್ಕಾಗಿ ಕರೆದಿರಬಹುದು? ಅಭ್ಯಾಸವನ್ನಂತೂ ತಮ್ಮ ಸೇವಾಕೇಂದ್ರಗಳಲ್ಲಿಯೂ ಮಾಡುತ್ತಿರುತ್ತೀರಿ. ಕೋರ್ಸ್ ಕೂಡ ಪೂರ್ಣ ಮುಗಿಸಿದ್ದೀರಿ. ಮುಖ್ಯ ಜ್ಞಾನದ ಪಾಠವೂ ಗೊತ್ತಾಗಿದೆ. ಇನ್ನೇನು ಉಳಿಯಿತು? ಮಾತೆಯರಿಗೆ ಒಂದು ಅಭ್ಯಾಸವಿರುತ್ತದೆ ಆ ಅಭ್ಯಾಸವನ್ನು ಪಕ್ಕಾ ಮಾಡಿಸಲು ಕರೆದಿರುವೆನು ಆ ಅಭ್ಯಾಸ ಕುಮಾರಿಯರಲ್ಲಿ ಇರುವುದಿಲ್ಲ ಮಾತೆಯರಲ್ಲಿಯೇ ಇರುತ್ತದೆ ಆ ಅಭ್ಯಾಸ ಯಾವುದು ? ಪತಿವ್ರತೆಯಾಗುವ ಅಭ್ಯಾಸ **ಪತಿವ್ರತೆ ಆಗುವುದು ಎಂದರೆ ಪೂರ್ತಿಯಾಗಿ ಬಲಿಯಾಗುವುದು**. ಪತಿವ್ರತೆಯರ ಮುಖ್ಯ ಗುಣ ಯಾವುದು ? ಸಂಲಗ್ನತೆಯನ್ನು ಜೋಡಿಸಿ ಕುಳಿತುಕೊಳ್ಳುವುದು. ಸಂಲಗ್ನತೆಯ ನಂತರ ಪ್ರತ್ಯಕ್ಷ ರೂಪವನ್ನು ತೋರಿಸಬೇಕು. ಪತಿವ್ರತೆಯಾಗಲು ತ್ಯಾಗ ಕೂಡ ಇರಬೇಕು ಮತ್ತು ನಷ್ಟೋಮೋಹಿಯಾಗಬೇಕು. ಸತ್ಯ ಸ್ನೇಹವಿದ್ದಾಗ ನಷ್ಟಮೋಹ ಆಗುವಿರಿ. ಯಾವುದಾದರೂ ವಸ್ತುವನ್ನು ಬೆಂಕಿಯಲ್ಲಿ ಹಾಕಿದಾಗ ಅದರ ರೂಪ-ಬಣ್ಣ ಬದಲಾಗುತ್ತದೆ. ಅದೇ ರೀತಿ ಬಂಧನಗಳಾದಂತಹ ಅಲ್ಪಸ್ವಲ್ಪ ಆಸುರಿ ಗುಣ, ಲೋಕ ಮರ್ಯಾದೆಗಳು, ಕರ್ಮಬಂಧನದ ಸಂಕೋಲೆಗಳು, ಮಮತೆಯ ಎಳೆಗಳೆಲ್ಲವನ್ನೂ ಸುಟ್ಟು ಹಾಕಬೇಕು. ಈ ಸ್ನೇಹದ ಅಗ್ನಿಯಲ್ಲಿ ಬೀಳುವುದರಿಂದ ಇವೆಲ್ಲವೂ ನಾಶವಾಗುವವು. ಆದ್ದರಿಂದ ತಮ್ಮ ರಂಗು-ರೂಪವನ್ನು ಬದಲಾಯಿಸಿಕೊಳ್ಳಬೇಕು. ಈ ತೀವ್ರ ನೆನಪಿನ ಅಗ್ನಿಯಲ್ಲಿ ಬಿದ್ದು ಪರಿವರ್ತನೆಯನ್ನು ತರಲು ಸಿದ್ಧರಾಗಿರುವಿರಾ? ಯಾವ ವಸ್ತು ಸುಟ್ಟು ಹೋಗುತ್ತದೆಯೋ ಅದು ನಾಶವಾಗುತ್ತದೆ. ಪುನಃ ಕಂಡು ಬರುವುದಿಲ್ಲ. ಈ ರೀತಿ ತಮ್ಮಲ್ಲಿ ಪರಿವರ್ತನೆ ತರುವ ಸಾಹಸವಿದೆಯೇ?

ತಮ್ಮೆಲ್ಲರ ನೆನಪಿನ ಕುರುಹು (ಯಾದಗಾರ್) ಕಾಯಂಆಗಿ ಇನ್ನೂ ಇದೆ. ತಮ್ಮ ಸ್ಮೃತಿ ಚಿಹ್ನೆ ಅಧಾರ ಯಾವ ಮಾತಿನ ಮೇಲಿದೆ? ನಿಮ್ಮ ನಿಮ್ಮ ನೆನಪಿನ ಆಧಾರದ ಮೇಲೆ ನಿಮ್ಮ ಸ್ಮೃತಿಚಿಹ್ನೆ (ಯಾದಗಾರ) ತಯಾರಾಗಿದೆ. ಇನ್ನೂವರೆಗೂ ಕಾಯಂ ಆಗಿವೆ. ಒಂದು ವೇಳೆ ನೆನಪು ಕಡಿಮೆಯಿದ್ದರೆ ಸ್ಮೃತಿಚಿಹ್ನೆ ಸಹ ಅದೇ ರೀತಿ ಇರುವುದು. ಸ್ಮೃತಿಚಿಹ್ನೆಯನ್ನು ಕಾಯಂ ಇಟ್ಟುಕೊಳ್ಳಲು ಮೊದಲು ನೆನಪನ್ನು ಕಾಯಂ ಇಟ್ಟುಕೊಳ್ಳಿರಿ, ಅದರ ಆಧಾರದ ಮೇಲೆ ಸ್ಮೃತಿಚಿಹ್ನೆ ಆಗುವುದು.

ಪ್ರತಿಯೊಬ್ಬರ ವಿಶೇಷ ಗುಣದ ಕಡೆಗೆ ಪ್ರತಿಯೊಬ್ಬರ ಗಮನವಿರಬೇಕು. ಒಬ್ಬೊಬ್ಬರ ವಿಶೇಷ ಗುಣವೇನಿದೆಯೋ ಅದನ್ನು ಪ್ರತಿಯೊಬ್ಬರೂ ತಮ್ಮಲ್ಲಿ ಧಾರಣೆ ಮಾಡಿದರೆ ಏನಾಗುವಿರಿ? ಸರ್ವಗುಣ ಸಂಪನ್ನ, ಹೇಗೆ ಆತ್ಮ ರೂಪವನ್ನು ನೋಡುತ್ತೀರೋ ಅದೇ ರೀತಿ ಕರ್ಮದಲ್ಲಿ ಬಂದಾಗ ಪ್ರತಿಯೊಬ್ಬರ ವಿಶೇಷ ಗುಣದ ಕಡೆಗೆ ನೋಡಿ, ಆಗ ಇನ್ನುಳಿದ ಮಾತುಗಳು ಮರೆತುಹೋಗುವವು, ಗುಣಗಳನ್ನೇ ತಮ್ಮಲ್ಲಿ ತುಂಬಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಮಾತೆಯರಿಗೆ ಚಂದ್ರನಂತೆ ತಿಲಕವನ್ನು ಹಚ್ಚಲಾಗಿದೆ. ಚಂದ್ರನ ಗುಣಗಳನ್ನು ತಮ್ಮಲ್ಲಿ ಧಾರಣೆ ಮಾಡಬೇಕು. ಆದರೆ, ಚಂದ್ರನ ಸಂಬಂಧ ಸೂರ್ಯನ ಜೊತೆಗೆ ಆಳವಾಗಿದೆ. ಆದ್ದರಿಂದ ಚಂದ್ರನಂತೆ ಸಂಬಂಧ ಮತ್ತು ಗುಣ ಧಾರಣೆ ಮಾಡಬೇಕು. ಮತ್ತು ಚಂದ್ರನ ಕರ್ತವ್ಯವೇನು? ಶೀತಲತೆಯ ಜೊತೆಗೆ ಪ್ರಕಾಶವನ್ನು ಕೊಡುತ್ತಾನೆ. ಒಳ್ಳೆಯದು ಈಗ ವಿದಾಯ.

ಅವ್ಯಕ್ತ ಮುರಳಿ 15-09-1969.

**ಸ್ಮೃತಿಯ ಆಧಾರದಿಂದ ಸ್ಮೃತಿ ಚಿನ್ಹೆ.**

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನಾನು ಕಂಬೈನ್ಡ್ ಸ್ವರೂಪ.

1. ನಾನು ಶಬ್ದದಲ್ಲಿ ಇದ್ದರೂ ಅತೀಂದ್ರಿಯ ಸುಖವನ್ನು ಅನುಭವ ಮಾಡುತ್ತಿದ್ದೇನೆ.

2. ನಾನು ಒಂದು ಕ್ಷಣದಲ್ಲಿ ನಿರಾಕಾರ, ಒಂದು ಕ್ಷಣದಲ್ಲಿ ಸಾಕಾರ ಸ್ಥಿತಿಯಲ್ಲಿ ಸ್ಥಿತವಾಗುವ ಅವ್ಯಕ್ತ ರೂಪದ ಸಾಕ್ಷಾತ್ಕಾರ ಮೂರ್ತಿ.

3. ನಾನು ವರ್ತಮಾನ ಸಮಯಾನುಸಾರ ಜಗನ್ಮಾತೆಯ ರೂಪದಲ್ಲಿ (ಅವ್ಯಕ್ತ ಮುರಳಿ 24-02-1988) ಸೇವೆಯನ್ನು ಮಾಡುತ್ತಿದ್ದೇನೆ.

4. ನಾನು ತಂದೆಯ ಸರ್ವ ಆಸ್ತಿಗೆ ವಾರಸುದಾರ.

5. ನಾನು ಸಂಪೂರ್ಣ ಬಲಿಹಾರಿಯಾಗಿರುವ ಪತಿವ್ರತಾ ಸ್ವರೂಪ.

6. ನಾನು ಸತ್ಯ ಸ್ನೇಹದಿಂದ ನಷ್ಟಮೋಹಿಯಾಗಿದ್ದೇನೆ .

7. ನಾನು ಸ್ನೇಹದ ಅಗ್ನಿಯಿಂದ ಸರ್ವ ಬಂಧನಗಳನ್ನು, ಅಸುರಿಗುಣ, ಲೋಕ ಮರ್ಯಾದೆಗಳು, ಕರ್ಮ ಬಂಧನದ ಸಂಕೋಲೆಗಳು, ಮಮತೆಯ ಎಳೆಗಳನ್ನು (ಆಲೋಚನಾ ಸ್ಥಾಯಿಯಲ್ಲಿ) ಸುಟ್ಟು ಹಾಕಿರುವ ಪರಿವರ್ತನಾ ಸ್ವರೂಪ.

8. ನಾನು ಸ್ಮೃತಿಯ ಆಧಾರದಿಂದ ಸ್ಮೃತಿ ಚಿನ್ಹೆ (ಯಾದಗಾರ್) ಯನ್ನು ತಯಾರಿಸಿಕೊಂಡಿದ್ದೇನೆ.

9. ನಾನು ಪ್ರತಿಯೊಬ್ಬರಲ್ಲಿರುವ ವಿಶೇಷ ಗುಣವನ್ನು ಧಾರಣೆ ಮಾಡಿರುವ ಸರ್ವಗುಣ ಸಂಪನ್ನ ಸ್ವರೂಪ.

10. ನಾನು ಚಂದ್ರನಂತೆ (ಬ್ರಹ್ಮಾ ತಂದೆ) ಸಂಬಂಧ ಮತ್ತು ಗುಣಗಳನ್ನು (ಶೀತಲತೆ ಮತ್ತು ಪ್ರಕಾಶ) ಧಾರಣೆ ಮಾಡಿದ್ದೇನೆ.